**C.C. No.3426/2022. PW-1.**

ದಿನಾಂಕ **11.01.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು

**<u>ಪಾಟೀ ಸವಾಲುಃ</u>- ಆರೋಪಿ ಪರ ಶ್ರೀ ಹೆಚ್ ಎನ್ ಎಸ್ ವಕೀಲರಿಂದ ಃ-**

ನಾನು ವ್ಯವಸಾಯ ಮಾಡುತ್ತೇನೆ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ನಾನು ಜನರಿಗೆ ಸಾಲ ಕೊಡುವುದು ಮತ್ತು ಅದರ ಮೇಲೆ ಬಡ್ಡಿ ವಸೂಲಿ ಮಾಡುವ ವ್ಯವಹಾರವನ್ನು ಮಾಡುವುದಿಲ್ಲ. ನನ್ನ ಬಡ್ಡಿ ವ್ಯವಹಾರ ಮಾಡುವ ಸ್ಥಳ ಇಲ್ಲ. ನನ್ನ ಮನೆಯಲ್ಲಿ ನಾನು, ನನ್ನ ಹೆಂಡತಿ ಗೀತಾ, ನನ್ನ ಇಬ್ಬರು ಮಕ್ಕಳು ಕೀರ್ತನ ಮತ್ತು ಪ್ರೀತಿ ರವರು ಇದ್ದೇವೆ. ನನ್ನ ಹೆಂಡತಿ ಗೀತಾ ಗೃಹಿಣಿ. ನನ್ನ ಮೊದಲನೇ ಮಗಳು ಪ್ರಥಮ ಪಿಯು ಅನ್ನು ವೇದಾವತಿ ಕಾಲೇಜು, ಕಡೂರಿನಲ್ಲಿ ಹಾಗೂ ಇನ್ನೊಬ್ಬ ಮಗಳು 8 ನೇ ತರಗತಿಯನ್ನು ಸರ್ಕಾರಿ ಶಾಲೆ 9 ನೇ ಮೈಲುಗಲ್ಲು-ವಿನಲ್ಲಿ ಕಲಿಯುತ್ತಿದ್ದಾರೆ. ವೇದಾವತಿ ಕಾಲೇಜು ಸಹಃ ಸರ್ಕಾರಿ ಕಾಲೇಜು ಎಂದರೆ ಸರಿ.

ನನ್ನ ಕುಟುಂಬಕ್ಕೆ ಬಿ ಪಿ ಎಲ್ ಪಡಿತರ ಚೀಟಿ ಇದೆ ಎಂದರೆ ಸರಿ. ಬಿ ಪಿ ಎಲ್ ಪಡಿತರ ಚೀಟಿಯನ್ನು ಸಾಮಾನ್ಯವಾಗಿ ಬಡವರಿಗೆ ನೀಡುತ್ತಾರೆ ಎಂದರೆ ಸರಿ. ನನಗೆ ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ನನ್ನ ಮನೆಯ ಖರ್ಚುಗಳನ್ನು ನಾನೇ ನೋಡಿಕೊಳ್ಳುತ್ತೇನೆ ಎಂದರೆ ಸರಿ. ನಾನು ತಿಂಗಳಿಗೆ ರೂ.10 ಸಾವಿರ ಹಣವನ್ನು ದುಡಿಯುತ್ತೇನೆ ಎಂದರೆ ಸಾಕ್ಷಿಯು ತಿಂಗಳಿಗೆ 2 ಲಕ್ಷ ಹಣವನ್ನು ನಾನು ದುಡಿಯುತ್ತೇನೆ ಎಂದು ನುಡಿಯುತ್ತಾರೆ. ನಾನು ಬಿ ಪಿ ಎಲ್ ಪಡಿತರ ಚೀಟಿ ಪಡೆಯುವ ಸಂದರ್ಭದಲ್ಲಿ ನನ್ನ ವಾರ್ಷಿಕ ಆದಾಯ ರೂ.25,000/- ಎಂದು ಹೇಳಿ ಪಡೆದಿರುತ್ತೇನೆ ಎಂದರೆ ಸರಿ.

ನನಗೆ ಮಾಸಿಕ 2 ಲಕ್ಷ ಆದಾಯ ಇರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಲಾವತಿ ರವರು ನಮ್ಮ ಊರಿನವರು. ಕಲಾವತಿರವರು ಯಾವ ದಿನಾಂಕ ಅಥವಾ ವರ್ಷದಿಂದ ಪರಿಚಯ ಎಂದು ನನ್ನ ದೂರಿನಲ್ಲಿ, ನೋಟೀಸಿನಲ್ಲಿ

ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ಅದೇ ರೀತಿ ಆರೋಪಿಯು ಯಾವ ರೀತಿಯಾಗಿ ಪರಿಚರಿಯವಾಗಿರುತ್ತಾರೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

ಆರೋಪಿಯು 2022 ರ ಫೆಬ್ರವರಿ ತಿಂಗಳಿನಿಂದಲೂ ಹಣ ಬೇಕು ಎಂದು ಕೇಳುತ್ತಿದ್ದರು. 2022 ರ ಫೆಬ್ರವರಿ ತಿಂಗಳಿನಿಂದಲೂ ಹಣ ಕೇಳುತ್ತಿದ್ದರು ಎಂಬುದನ್ನು ದೂರಿನಲ್ಲಿ, ನೋಟೀಸಿನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ಆರೋಪಿಗೆ ನಾನು 3 ಲಕ್ಷ ಹಣ ಕೊಟ್ಟಿರುತ್ತೇನೆ. ಸದರಿ ಹಣವನ್ನು ನಗಧು ರೂಪದಲ್ಲಿ ನೀಡಿರುತ್ತೇನೆ. ರೂ.500 ರ ಮುಖ ಬೆಲೆಯ 6 ಕಟ್ಟು ಗಳಲ್ಲಿ ಆರೋಪಿಗೆ ಹಣ ನೀಡಿರುತ್ತೇನೆ. ಸದರಿ ಹಣವನ್ನು ನನ್ನ ಮನೆಯಲ್ಲಿ ದಿಃ03.05.2022 ರಂದು ನೀಡಿರುತ್ತೇನೆ. ನಾನು ಹಣ ಕೊಟ್ಟ ಸಂದರ್ಭದಲ್ಲಿ ನನ್ನ ವಕೀಲರು ಹಾಜರು ಇರಲಿಲ್ಲ. ನಾನು ಚಂದ್ರಮ್ಮ, ಕಲಾವತಿ ಮತ್ತು ಬಸವರಾಜು ರವರಿಗೆ ಹಣ ನೀಡಿರುತ್ತೇನೆ. ಚಂದ್ರಮ್ಮ ರವರಿಗೆ ರೂ.4,50,000/- ಹಣವನ್ನು ನೀಡಿರುತ್ತೇನೆ, ದಿನಾಂಕ ನನಗೆ ನೆನಪಿಲ್ಲ. ಚಂದ್ರಮ್ಮ ರವರಿಗೆ ಹಣವನ್ನು ಕೊಟ್ಟಾಗ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಪತ್ನಿ ಇದ್ದೇವು. ಆ ಸಮಯದಲ್ಲಿಯೂ ಸಹಃ ನನ್ನ ವಕೀಲರು ಹಾಜರು ಇರಲಿಲ್ಲ. ಚಂದ್ರಮ್ಮ ರವರು ಎಸ್ ಬಿ ಐ ಬ್ಯಾಂಕಿನ ಚೆಕ್ ಅನ್ನು ಕೊಟ್ಟಿದ್ದರು. ಸದರಿ ಚೆಕ್ ಸಂಖ್ಯೆ ನನಗೆ ಗೊತ್ತಿಲ್ಲ. ಚಂದ್ರಮ್ಮ ರವರು ನೀಡಿದ ಚೆಕ್ ಅನ್ನು ಬ್ಯಾಂಕಿಗೆ ಯಾವ ದಿನಾಂಕ ಹಾಜರುಪಡಿಸಿರುತ್ತೇನೆ ಎಂದು ನೆನಪಿಲ್ಲ. ಚಂದ್ರಮ್ಮ ರವರು ನೀಡಿದ ಚೆಕ್‌ನ ಮೇಲೂ ಸಹಃ ಇದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿರುತ್ತೇನೆ.

ಬಸವೇಗೌಡ ರವರಿಗೆ ದಿಃ01.05.2022 ರಂದು ರೂ.6,50,000/- ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಸದರಿ ಹಣವನ್ನು ರೂ.500 ರ ಮುಖ ಬೆಲೆಯ ನೋಟುಗಳ 13 ಕಟ್ಟುಗಳನ್ನು ನನ್ನ ಮನೆಯಲ್ಲಿ ಬಸವೇಗೌಡರವರಿಗೆ ನೀಡಿರುತ್ತೇನೆ. ಆ ಸಮಯದಲ್ಲಿಯೂ ಸಹಃ ನನ್ನ ವಕೀಲರು ಹಾಜರು ಇರಲಿಲ್ಲ. ಬಸವೇಗೌಡ ರವರು ನನಗೆ ನೀಡಿದ ಚೆಕ್ ಅನ್ನು ಅವರೇ ಬರವಣಿಗೆ ಮಾಡಿರುತ್ತಾರೆ. ಚಂದ್ರಮ್ಮ ರವರು ನನಗೆ ನೀಡಿದ ಚೆಕ್ ಅನ್ನು ಯಾರು ಬರವಣಿಗೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಕಲಾವತಿ ರವರು ನನಗೆ ನೀಡಿದ ಚೆಕ್ ಅನ್ನು ಕಲಾವತಿ ರವರ ಗಂಡ ಬರವಣಿಗೆ ಮಾಡಿರುತ್ತಾರೆ.

ಕಲಾವತಿ ರವರು ನೀಡಿರುವ ಚೆಕ್ ನಿಪಿ1 ಚೆಕ್ ಆಗಿರುತ್ತದೆ. ಬಸವೇಗೌಡ ರವರು ನೀಡಿದ ಚೆಕ್ ಮತ್ತೊಂದು ಪ್ರಕರಣವಾದ ಸಿ.ಸಿ.ಸಂಖ್ಯೆ 3425/2022 ರಲ್ಲಿ ನಿಪಿ1 ಎಂದು ನಿಶಾನೆಯಾಗಿ ಗುರುತಾಗಿರುತ್ತದೆ ಎಂದರೆ ಸರಿ.

ಈ ಹಂತದಲ್ಲಿ ಸಾಕ್ಷಿಗೆ ಇದೇ ನ್ಯಾಯಾಲಯದ ಸಿ.ಸಿ.ಸಂಖ್ಯೆ 3425/2022 ರಲ್ಲಿನ ನಿಪಿ1 ಚೆಕ್ ನ ದೃಢೀಕೃತ ನಕಲನ್ನು ತೋರಿಸಿ ಬಸವೇಗೌಡ ರವರು ನೀಡಿದ ಚೆಕ್ ಇದೇ ಆಗಿರುತ್ತದೆ ಎಂದು ಗುರುತಿಸಿದ ಮೇರೆಗೆ, ಸದರಿ ದೃಢೀಕೃತ ನಕಲನ್ನು ನಿಡಿ 1 ಎಂದು ಗುರುತಿಸಲಾಯಿತು.

ನಿ.ಡಿ.1 ರಲ್ಲಿರುವ ಬರವಣಿಗೆ ಮತ್ತು ಈ ಪ್ರಕರಣದ ನಿಪಿ1 ರಲ್ಲಿರುವ ಬರವಣಿಗೆ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ನಿಡಿ 1 ಮತ್ತು ಈ ಪ್ರಕರಣದ ನಿಪಿ1 ರ ಬರವಣಿಗೆಗಳನ್ನು ನನ್ನ ವಕೀಲರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಸಲ್ಲಿಸಿರುವ ವಕಾಲತ್ತಿನಲ್ಲಿರುವ ಬರವಣಿಗೆ ಮತ್ತು ನಿಡಿ 1 ಮತ್ತು ನಿಪಿ1 ರಲ್ಲಿರುವ ಬರವಣಿಗೆ ಒಂದೇ ರೀತಿಯಾಗಿ ಇದ್ದು, ಈ ಎಲ್ಲಾ ಬರವಣಿಗೆಗಳನ್ನು ನನ್ನ ವಕೀಲರು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ಬರವಣಿಗೆಗಳನ್ನು ನನ್ನ ವಕೀಲರೇ ಮಾಡಿದ್ದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ತರೀಕೆರೆ ತಾಲ್ಲೂಕಿನ ಬೆಟ್ಟದಳ್ಳಿ ಗ್ರಾಮದ ವಾಸಿಯಾದ ಕಲ್ಲಪ್ಪ ರವರ ಮಗ ಮಹೇಶ್ವರಪ್ಪ ನನಗೆ ಗೊತ್ತಿಲ್ಲ. ಸದರಿ ಮಹೇಶ್ವರಪ್ಪ ರವರು ನನ್ನ ಪತ್ನಿ ಗೀತಾ ರವರಿಗೆ ಚೆಕ್ ಬೌನ್ಸ್ ಆಗಿರುತ್ತದೆ ಎಂದು ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪತ್ನಿಯು ಕಡೂರು ಶಾಖೆಯ ಅಕ್ಸಿಸ್ ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಕ್ಲೋಸ್ ಮಾಡಿ 5 ವರ್ಷವಾಗಿದೆ ಎಂದು ನುಡಿಯುತ್ತಾರೆ. 2021 ನೇ ಇಸವಿಯಲ್ಲಿ ನನ್ನ ಪತ್ನಿಯು ಮಹೇಶ್ವರಪ್ಪ ರವರಿಂದ ರೂ.4 ಲಕ್ಷ ಹಣವನ್ನು ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ 4 ಲಕ್ಷ ತಿರೀಸಲು ಅಕ್ಸಿಸ್ ಬ್ಯಾಂಕ್ ನ

ಚೆಕ್ ಅನ್ನು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಮಹೇಶ್ವರಪ್ಪ ರವರು ನನ್ನ ಪತ್ನಿ ನೀಡಿದ್ದ ಚೆಕ್ ಅನ್ನು ಬ್ಯಾಂಕಿಗೆ ಹಾಜರುಪಡಿಸಿದ್ದಾಗ ಅದು ಅಮಾನ್ಯಗೊಂಡಿದ್ದು, ಆ ಬಗ್ಗೆ ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟೀಸಿಗೆ ನನ್ನ ಪತ್ನಿಯು ಕಡೂರಿನ ರೇಣುಕಾಪ್ರಸಾದ್ ಎಂಬ ವಕೀಲರ ಮೂಲಕ ಉತ್ತರ ನೀಡಿದ್ದರು ಎಂದರೆ ಸರಿ. ಸದರಿ ಚೆಕ್ಕಿನ ಪ್ರಕರಣವು ತರೀಕೆರೆ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇದೆ ಎಂದರೆ ಸರಿಯಲ್ಲ.

ಕಲಾವತಿ, ಬಸವೇಗೌಡ, ಚಂದ್ರಮ್ಮ ಮತ್ತು ನನ್ನ ಪತ್ನಿಯವರು ಸೇರಿಕೊಂಡು ಹಾಗೂ ನನ್ನ ಪತ್ನಿಯು ಏಜೆಂಟ್ ಆಗಿ ಒಂದು ಚೀಟಿ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಚೀಟಿ ವ್ಯವಹಾರದ ಭದ್ರತೆಗೆಂದು ನನ್ನ ಪತ್ನಿಯು ಸದಸ್ಯರಿಂದ ಚೆಕ್ ಗಳನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಚೀಟಿ ವ್ಯವಹಾರದ ವಿಷಯವಾಗಿ ನನ್ನ ಪತ್ನಿಯ ವಿರುದ್ಧ ಯಗಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸದರಿ ದೂರಿನಲ್ಲಿ ನನ್ನ ಪತ್ನಿಯು ಚೆಕ್ ಗಳನ್ನು ವಾಪಾಸು ಕೊಡುತ್ತೇನೆ ಎಂದು ಹೇಳಿಕೆ ನೀಡಿದ್ದರಿಂದ ಸದರಿ ದೂರು ಮುಕ್ತಾಯಗೊಂಡಿರುತ್ತದೆ ಎಂದರೆ ಸರಿಯಲ್ಲ. ಸದರಿ ಚೆಕ್ ಗಳನ್ನು ನನ್ನ ಪತ್ನಿಯು ಸದಸ್ಯರಿಗೆ ವಾಪಾಸು ಕೊಡದೆ ನನ್ನ ಮೂಲಕವಾಗಿ ಈ ಚೆಕ್ ಪ್ರಕರಣಗಳನ್ನು ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಅನುಮತಿ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.